





ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಪಕ್ಷಿನೋಟ



ಕಛೇರಿ : ಗಾಂಧೀಭವನ, ಕುಮಾರ ಪಾರ್ಕ್ ಪೂರ್ವ.
ಬೆಂಗಳೂರು – 560 001 ದೂರವಾಣಿ : 22261967

ಸತ್ಯ ಅಹಿಂಸೆಗಳ ಆಧಾರದ ಮೇಲೆ ರಕ್ತ ರಹಿತ ಕ್ರಾಂತಿಯ ಮೂಲಕ ಶತಮಾನಗಳಷ್ಟು ದೀರ್ಘಕಾಲದ ಪರಕೀಯರ ಆಡಳಿತ ಯಂತ್ರವನ್ನು ಭಾರತದಿಂದ ಹೊರಗಟ್ಟಲು ತನ್ನ ಸರ್ವಸ್ವವನ್ನು ತ್ಯಾಗ ಮಾಡುವುದರ ಮೂಲಕ ಯಶಸ್ಸನ್ನು ಪಡೆದ ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರು 1948ರ ಜನವರಿ 30ನೇ ದಿನಾಂಕ ಹಂತಕ ನೋರ್ವನ ಗುಂಡಿಗೆ ಬಲಿಯಾದದ್ದು ಇತಿಹಾಸದ ಭಾಗವಾಗಿದೆ.

ಭಾರತಕ್ಕೆ ಸ್ವಾತಂತ್ರ್ಯಗಳಿಸಲು ಅಹರ್ನಿಶಿ ದುಡಿದ ತ್ಯಾಗ ಪುರುಷನ ನೆನಪು ಜನಸಮುದಾಯದಲ್ಲಿ ನಿರಂತರ ಉಳಿಯುವಂತೆ ಮಾಡಲು ರಾಷ್ಟ್ರದ ಮಹಾನ್ ನಾಯಕರೆಲ್ಲರೂ ಸೇರಿ ಅಂದಿನ ಪ್ರಧಾನಿ ಪಂಡಿತ್ ಜವಹರಲಾಲ್ ನೆಹರೂರವರ ಅಧ್ಯಕ್ಷತೆಯಲ್ಲಿ ದೆಹಲಿಯ ರಾಜ್ ಘಾಟ್‌ನಲ್ಲಿ "ಗಾಂಧೀ ಸ್ಮಾರಕ ನಿಧಿ" ಎಂಬ ಸಂಸ್ಥೆಯನ್ನು ಸ್ಥಾಪನೆ ಮಾಡಿದರು. ಆ ಸಂಸ್ಥೆಯ ಮೂಲಕ ಗಾಂಧೀಜೀಯವರ ರಚನಾತ್ಮಕ ಕಾರ್ಯ ಯೋಜನೆಗಳ ಅನುಷ್ಠಾನ, ಅವರ ತತ್ವಗಳ ಪ್ರಚಾರ, ಅವರ ಸಾಹಿತ್ಯದ ಪ್ರಕಟಣೆ ಮುಂತಾದ ಕಾರ್ಯಗಳನ್ನು ಹಮ್ಮಿಕೊಳ್ಳಲಾಯಿತು.

ಈ ನಿಟ್ಟಿನಲ್ಲಿ ಅಂದಿನ ಮೈಸೂರು ರಾಜ್ಯದಲ್ಲಿಯೂ ಗಾಂಧೀ ಸ್ಮಾರಕ ನಿಧಿಯ ಶಾಖೆಯೊಂದನ್ನು ದಿವಂಗತ ಆರ್.ಆರ್. ದಿವಾಕರ್ ಅವರ ಮುಂದಾಳುತನದಲ್ಲಿ ಸ್ಥಾಪಿಸಿ ರಾಜ್ಯಮಟ್ಟದಲ್ಲಿ ಗಾಂಧೀ ವಿಚಾರಧಾರೆಯನ್ನು ಅನುಷ್ಠಾನಗೊಳಿಸಲು ವ್ಯವಸ್ಥೆ ಮಾಡಲಾಗಿತ್ತು. ತದನಂತರ ರಾಷ್ಟ್ರದಲ್ಲಿ ಭಾಷಾವಾರು ಪ್ರಾಂತ್ಯಗಳು ರಚನೆಯಾದ ಸಂದರ್ಭದಲ್ಲಿ ಕೇಂದ್ರ ಗಾಂಧೀ ಸ್ಮಾರಕ ನಿಧಿಯಲ್ಲಾದ ಬೆಳವಣಿಗೆಗಳ ಹಿನ್ನಲೆಯಲ್ಲಿ, ರಾಜ್ಯದ ಗಾಂಧೀ ಸ್ಮಾರಕ ನಿಧಿ " ಕರ್ನಾಟಕ ಗಾಂಧೀ ಸ್ಮಾರಕ ನಿಧಿ" ಎಂದು ನೊಂದಣಿ ಪಡೆದು ಸ್ವಾಯತ್ತ ಸಂಸ್ಥೆಯಾಗಿ ಪರಿವರ್ತನೆ ಹೊಂದಿತು.

ಕರ್ನಾಟಕ ಸರಕಾರ ಬೆಂಗಳೂರಿನ ಕುಮಾರಪಾರ್ಕ್ ಪೂರ್ವ ಬಡಾವಣೆಯಲ್ಲಿ ಕುಮಾರ ಕೃಪ ಪರಿಸರದಲ್ಲಿ ಗಾಂಧೀ ಭವನವನ್ನು ನಿರ್ಮಾಣ ಮಾಡಿ ಆ ಕಟ್ಟಡದ ನಿರ್ವಹಣಾ ಜಬಾಬ್ದಾರಿಯನ್ನು ಕರ್ನಾಟಕ ಗಾಂಧೀ ಸ್ಮಾರಕ ನಿಧಿಗೆ ವಹಿಸಿಕೊಟ್ಟಿತು. ಈ ಕಟ್ಟಡದಲ್ಲಿಯೇ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಕಛೇರಿ ಮತ್ತು ಗಾಂಧಿ ವಸ್ತು ಸಂಗ್ರಹಾಲಯವಿರುವುದು.

ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀಯುತ ಎಚ್.ಡಿ.ಕುಮಾರಸ್ವಾಮಿಯವರ ಉದಾರತೆಯಿಂದ ಗಾಂಧೀಭವನ ಇದೀಗ ನವೀಕರಣಗೊಂಡಿದೆ. ಇಲ್ಲಿನ ವಸ್ತು ಸಂಗ್ರಹಾಲಯವನ್ನು ಉನ್ನತೀಕರಿಸುವುದರ ಜೊತೆಗೆ ಗಾಂಧೀ ವಿಚಾರಗಳ ಮಾಹಿತಿ ಕೇಂದ್ರ, ವೆಬ್ ಸೈಟ್ ಮುಂತಾದುವುಗಳನ್ನು ತೆರೆಯಲು ಅವಕಾಶ ಕಲ್ಪಿಸಲಾಗಿದೆ. ಅಂದರೆ 20 ನೇ ಶತಮಾನದ 60ನೇ ದಶಕದಿಂದ ಸುಣ್ಣ ಬಣ್ಣ ಕಾಣದಿದ್ದ ಗಾಂಧೀ ಭವನ ಈಗ ನವ ವಧುವಿನಂತೆ ಅಲಂಕೃತವಾಗಿ ನೋಡುಗರ ಮೆಚ್ಚುಗೆಗೆ ಪಾತ್ರವಾಗಿದೆ.

ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಆಶ್ರಯದಲ್ಲಿ ನಡೆಸಲಾಗುತ್ತಿರುವ ಕೆಲವು ಕಾರ್ಯಕ್ರಮಗಳು ಇಂತಿವೆ :

ಸರ್ವೋದಯ ದಿನಾಚರಣೆ : ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಪ್ರತಿ ವರ್ಷವೂ ಹುತಾತ್ಮರ ದಿನವನ್ನು ಸರ್ವೋದಯ ದಿನಾಚರಣೆಯನ್ನಾಗಿ ಜನವರಿ 30 ರಂದು ಆಚರಿಸಿಕೊಂಡು ಬರುತ್ತಿದೆ. ಈ ಕಾರ್ಯಕ್ರಮದ ಅಂಗವಾಗಿ ಮೌನ ಮೆರವಣಿಗೆ ಸರ್ವಧರ್ಮ ಪ್ರಾರ್ಥನೆ ಕಾರ್ಯಕ್ರಮಗಳನ್ನು ನಡೆಸುತ್ತಿದೆ.



ವಿಚಾರ ಸಂಕಿರಣ ಮತ್ತು ಸಮಾವೇಶಗಳನ್ನು ನಡೆಸುವುದು :

ಮಹಾತ್ಮಾ ಗಾಂಧೀಜಿಯವರ ತತ್ವ ಮತ್ತು ಆದರ್ಶಗಳನ್ನು ಕುರಿತ ವಿಚಾರ ಸಂಕಿರಣಗಳು ಮತ್ತು ಸಮಾವೇಶಗಳನ್ನು ಆಗಿಂದಾಗ್ಗೆ ರಾಜ್ಯದ ನಾನಾ ಕಡೆಗಳಲ್ಲಿ ನಡೆಸುತ್ತಿದೆ. ಸಮಾಜದಲ್ಲಿ ಉಂಟಾಗುವ ಪ್ರಚಲಿತ ಸಮಸ್ಯೆಗಳ ಬಗ್ಗೆಯೂ ಆಗಿಂದಾಗ್ಗೆ ವಿಚಾರ ಸಂಕಿರಣಗಳು ಮತ್ತು ಚರ್ಚಾ ಗೋಷ್ಠಿಗಳನ್ನು ನಡೆಸಿ ಮೂಡಿ ಬರುವ ಅಭಿಪ್ರಾಯಗಳನ್ನೂ ಸೂಕ್ತ ಸಲಹೆಗಳನ್ನು ಸಂಭಂಧಿಸಿದವರಿಗೆ ರವಾನಿಸುತ್ತಿದೆ.

ಗಾಂಧೀ ಜಯಂತಿ : ಪ್ರತಿ ವರ್ಷವೂ ಅಕ್ಟೋಬರ್ 2 ರಂದು ಗಾಂಧೀ ಜಯಂತಿಯ ಆಚರಣೆಯನ್ನು ಮೌನ ಮೆರವಣಿಗೆ ಯನ್ನು ಏರ್ಪಡಿಸುವುದರ ಮೂಲಕ ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಮಹಾತ್ಮಾ ಗಾಂಧಿಯವರ ಆದರ್ಶಗಳನ್ನು ಜೀವನ ತತ್ವಗಳನ್ನು ಒಳಗೊಂಡು ರಚಿಸಿರುವ ಕೃತಿ ಕರ್ತರಿಗೆ ಪ್ರಶಸ್ತಿ ಪ್ರಧಾನ ಮಾಡಲಾಗುತ್ತಿದೆ. ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಗಾಂಧೀಜಿ ಯವರನ್ನು ಕುರಿತು ಪ್ರಬಂಧ





ಸ್ಪರ್ಧೆಯನ್ನು ನಡೆಸಿ ಉತ್ತಮ ಪ್ರಬಂಧಗಳಿಗೆ ಪ್ರಶಸ್ತಿಗಳನ್ನು ಪ್ರೋತ್ಸಾಹಕರ ಬಹುಮಾನ ಗಳನ್ನು ನೀಡಲಾಗುತ್ತಿದೆ. ಅನುಭವಿ ಗಾಂಧೀ ಅನುಯಾಯಿಗಳಿಂದ ಮಹಾತ್ಮಾಜಿಯವರು ನೀಡಿರುವ ಹದಿನೆಂಟು ರಚನಾತ್ಮಕ ಕಾರ್ಯಕ್ರಮಗಳಲ್ಲಿ ಕೆಲವನ್ನು ಕುರಿತು ಉಪನ್ಯಾಸಗಳನ್ನು ಏರ್ಪಡಿಸುತ್ತಿದೆ.

ಮಹಿಳಾ ಸಮಸ್ಯೆಗಳ ಬಗ್ಗೆ ಕಾರ್ಯಕ್ರಮ : ಇತ್ತೀಚಿನ ದಿನಗಳಲ್ಲಿ ಸಮಾಜದಲ್ಲಿ ಮಹಿಳೆಯರಿಗೆ ಉಂಟಾಗುತ್ತಿರುವ ಅನ್ಯಾಯಗಳ ಬಗ್ಗೆ ಜನಮನದಲ್ಲಿ ಅರಿವುಂಟು ಮಾಡುವುದಕ್ಕೆ ಸಮಸ್ಯೆಗಳ ಪರಿಹಾರಕ್ಕೆ ಸೂಕ್ತ ಕಾರ್ಯಕ್ರಮಗಳನ್ನು ಆಯೋಜಿಸಿ ಸಮಸ್ಯೆಗಳನ್ನು ಎದುರಿಸಲು ಆಸಕ್ತ ಮಹಿಳೆಯರಿಗೆ ತರಬೇತಿ ಶಿಬಿರಗಳನ್ನು ನಡೆಸುವುದು ಮುಂತಾದ ಕಾರ್ಯ ಕ್ರಮಗಳನ್ನು ರಾಜ್ಯದ ವಿವಿಧ ಜಿಲ್ಲಾ ಕೇಂದ್ರಗಳಲ್ಲೂ ಹಮ್ಮಿ ಕೊಳ್ಳುತ್ತಿದೆ.



ಪ್ರಕೃತಿ ಚಿಕಿತ್ಸೆ ಮತ್ತು ಯೋಗ ತರಗತಿಗಳನ್ನು ನಡೆಸುವುದು :

ಗಾಂಧಿ ಸ್ಮಾರಕ ನಿಧಿಯ ವತಿಯಿಂದ ಪ್ರಕೃತಿ ಚಿಕಿತ್ಸೆ ಹಾಗೂ ಯೋಗ ತರಬೇತಿಗಳನ್ನು ಗಾಂಧೀಭವನದಲ್ಲಿ ನಡೆಸಲಾಗುತ್ತಿದೆ.

ಯುವಜನರಿಗೆ ಗಾಂಧೀ ವಿಚಾರಧಾರೆ

ಪ್ರತಿವರ್ಷವೂ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಕಾರ್ಯ ನಿರ್ವಾಹಕ ಸಮಿತಿ ಸಭೆಯನ್ನು ಆಗಿಂದಾಗ್ಗೆ ನಡೆಸುವುದರ ಜೊತೆಯಲ್ಲಿ ಆ ಜಿಲ್ಲೆಯಲ್ಲಿನ ಶಾಲೆ ಕಾಲೇಜುಗಳಿಗೆ ಆಗಿಂದಾಗ್ಗೆ ಭೇಟಿಯಿತ್ತು ಗಾಂಧೀಜಿಯವರ ಆದರ್ಶಗಳನ್ನು ವಿದ್ಯಾರ್ಥಿಗಳಿಗೆ ತಲುಪಿಸುವ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದೆ.

ರಾಜ್ಯದ ವಿವಿಧ ಸ್ಥಳಗಳಲ್ಲಿ ಗಾಂಧೀಜಿ ವಿಚಾರ ಪ್ರಚಾರ ಕಾರ್ಯಕ್ರಮವನ್ನು ಆಯೋಜಿಸಿ ವಿದ್ಯಾರ್ಥಿಸಮೂಹಕ್ಕೆ, ಯುವಶಕ್ತಿಗೆ ಗಾಂಧಿ ವಿಚಾರವನ್ನು ತಲುಪಿಸುವ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದೆ.

ಗಾಂಧೀ ಸಾಹಿತ್ಯ ಪ್ರಕಾಶನ ಮತ್ತು ಮಾರಾಟ : ಗಾಂಧೀಜಿಯವರ ಕೃತಿಗಳನ್ನು ಅವರ ಬಗ್ಗೆ ಇತರರು ಬರೆದಿರುವ ಕೃತಿಗಳನ್ನು ಅವರ ಆದರ್ಶಗಳು ಮತ್ತು ತತ್ವಗಳನ್ನು ಒಳಗೊಂಡ ಕೃತಿಗಳನ್ನು ಕನ್ನಡದಲ್ಲಿ ಪ್ರಕಟಿಸುವುದು ಮತ್ತು ಮಾರಾಟ ಮಾಡುವ ಕಾರ್ಯಕ್ರಮ ಸಾರ್ವಜನಿಕ ಮೆಚ್ಚುಗೆಗೆ ಪಾತ್ರವಾಗಿದೆ. ಗಾಂಧೀಭವನದ ಆವರಣದಲ್ಲಿರುವ ಕಸ್ತೂರ್‌ಬಾ ಭವನದಲ್ಲಿನ ಸುಸಜ್ಜಿತ ಪುಸ್ತಕ



ಮಳಿಗೆ ಮೂಲಕ ವಾರ್ಷಿಕ ಸುಮಾರು 5 ಲಕ್ಷರೂಪಾಯಿಗಳಿಗೂ ಹೆಚ್ಚು ವಹಿವಾಟು ನಡೆಯುತ್ತದೆ.

ಗ್ರಂಥಾಲಯ : ಗಾಂಧೀ ಸ್ಮಾರಕ ನಿಧಿ ತನ್ನದೇ ಆದ ಗ್ರಂಥಾಲಯವನ್ನು ಹೊಂದಿದ್ದು ಇದರಲ್ಲಿ ಮಹಾತ್ಮ ಗಾಂಧೀಜಿಯವರು ರಚಿಸಿದ ಕೃತಿಗಳಲ್ಲದೇ ರಾಷ್ಟ್ರದ ಇತರೆ ಮಹಾನ್ ನಾಯಕರುಗಳು ಗಾಂಧೀಜಿಯವರನ್ನು ಕುರಿತು ರಚಿಸಿರುವ ಸುಮಾರು 10,000 ಕೃತಿಗಳು ಲಭ್ಯವಿವೆ. ಈ ಗ್ರಂಥಾಲಯ ಕಸ್ತೂರ್ ಬಾ ಭವನದ ಕೆಳ ಅಂತಸ್ತಿನಲ್ಲಿದೆ.



ಗಾಂಧೀ ವಸ್ತು ಸಂಗ್ರಹಾಲಯ : ಗಾಂಧೀ ಭವನದಲ್ಲಿ ಮಹಾತ್ಮ ಗಾಂಧೀಜಿಯವರ ಅಪರೂಪದ ಭಾವ ಚಿತ್ರಗಳು, ಗಾಂಧೀಜಿಯವರು ಉಪಯೋಗಿಸಿದ ವಸ್ತುಗಳ (ನಕಲುಗಳು) ಮತ್ತು ಅವರ ಪತ್ರದ ನಕಲುಗಳು ಮುಂತಾದವುಗಳನ್ನು ಸಾರ್ವಜನಿಕರಿಗೂ ಶಾಲಾ, ಕಾಲೇಜು ವಿದ್ಯಾರ್ಥಿಗಳ ವೀಕ್ಷಣೆಗಾಗಿ ವಸ್ತು ಸಂಗ್ರಹಾಲಯವನ್ನು ಏರ್ಪಡಿಸಿ ಅವಕಾಶ ಕಲ್ಪಿಸಲಾಗಿದೆ.



ಕಸ್ತೂರಿಬಾ ಭವನ ನಿರ್ಮಾಣ : ಕೇಂದ್ರ ಸರ್ಕಾರದ ಮಾಜಿ ರೇಲ್ವೆ ಸಚಿವರಾದ ಶ್ರೀಯುತ ಜಾಫರ್ ಶರೀಫರು ಮತ್ತು ಕೇಂದ್ರ ಯೋಜನಾ ಖಾತೆ ರಾಜ್ಯ ಸಚಿವರಾಗಿರುವ ಶ್ರೀ ಎಂ.ವಿ. ರಾಜಶೇಖರನ್ ಇವರ ನೆರವಿನಿಂದ ಗಾಂಧೀಭವನದ ಆವರಣದಲ್ಲಿ ಕಸ್ತೂರಬಾ ಭವನ ನಿರ್ಮಿಸಲಾಗಿದ್ದು ಈ ಭವನ 2 ಅಂತಸ್ತುಗಳಾಗಿದ್ದು ಗಾಂಧಿ ಶಾಂತಿ ಪ್ರತಿಷ್ಠಾನ ಹಾಗೂ ಸಂಸದೀಯ ವ್ಯವಹಾರಗಳ ಮತ್ತು ಹರಿಜನ ಸೇವಕ ಸಂಘದ ಕಛೇರಿಗಳ ಜೊತೆಗೆ ಯೋಗ ತರಗತಿಗಳು ಅಲ್ಲಿ ನಡೆಯುತ್ತಿವೆ. ಮೇಲ್ಕಂಡ ಕಾರ್ಯಕ್ರಮಗಳಲ್ಲದೆ ಇತರೆ ಗಾಂಧಿ ಸೇವಾ ಕೇಂದ್ರಗಳ ಸಹಯೋಗದೊಂದಿಗೆ ಮಹಾತ್ಮಾ ಗಾಂಧೀಜಿಯವರ

ಬಗ್ಗೆ ಹತ್ತು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಗಾಂಧೀ ಭವನದಲ್ಲಿರುವ ಗಾಂಧೀ ವಸ್ತು ಸಂಗ್ರಹಾಲಯದ ನವೀಕರಣದ ಬಗ್ಗೆ ಕ್ರಮ ಕೈಗೊಂಡಿದ್ದು ಇದರೊಂದಿಗೆ ಆಡಿಯೋ ವಿಷುಯಲ್ ಆಡಿಟೋರಿಯಂ, ಡಾಕ್ಯುಮೆಂಟೇಷನ್ ಸೆಂಟರ್ ಮತ್ತು ಮಲ್ಟಿಮೀಡಿಯಾ ಕೇಂದ್ರಗಳನ್ನು ತೆರೆಯುವ ಕ್ರಮ ಕೈಗೊಳ್ಳಲಾಗಿದೆ.

ದತ್ತಿ ಕಾರ್ಯಕ್ರಮಗಳು

1. **ಸರ್ದಾರ್ ವೆಂಕಟರಾಮಯ್ಯ ದತ್ತಿ** : ಪ್ರತಿವರ್ಷವೂ ಗಾಂಧೀವಾದಿ ಸರ್ವೋದಯ ಕಾರ್ಯಕರ್ತರಾಗಿದ್ದ ಸರ್ದಾರ್ ವೆಂಕಟರಾಮಯ್ಯ ದತ್ತಿ ಯಡಿಯಲ್ಲಿ ಸ್ವಾತಂತ್ರ್ಯ ಹೋರಾಟಗಾರರು ಸರ್ವೋದಯ ಕಾರ್ಯಕರ್ತರೊಬ್ಬರನ್ನು ಸನ್ಮಾನಿಸುವ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ.

2. **ಸ್ವಾತಂತ್ರ್ಯ ಹೋರಾಟಗಾರರಾದ ಹನುಮಂತರಾವ್ ಕೌಜಲಗಿ ದತ್ತಿ** : ಕಾರ್ಯ ಕ್ರಮ ದಡಿಯಲ್ಲಿ ಶಾಲಾ ಕಾಲೇಜಿನ ವಿದ್ಯಾರ್ಥಿಗಳಿಗೆ ಮಹಾತ್ಮ ಗಾಂಧೀಜಿಯವರ ರಚನಾತ್ಮಕ ಕಾರ್ಯಗಳ ಬಗ್ಗೆ ಪ್ರಬಂಧ ಸ್ಪರ್ಧೆಗಳನ್ನು ಏರ್ಪಡಿಸುವ ಮುಖೇನ ಗಾಂಧೀ ಮೌಲ್ಯಗಳನ್ನು ವಿದ್ಯಾರ್ಥಿ ಸಮೂಹದಲ್ಲಿ ಬೆಳೆಸಲು ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನವನ್ನು ಪುಸ್ತಕ ರೂಪದಲ್ಲಿ ಕೊಡಲಾಗುತ್ತಿದೆ.

3. **ಸ್ವಾತಂತ್ರ್ಯ ಹೋರಾಟಗಾರ ನರಸಿಂಹ ದಾಬಡೆ ದತ್ತಿ** : ಈ ದತ್ತಿ ವತಿಯಿಂದ ಹಿರಿಯ ಸ್ವಾತಂತ್ರ್ಯ ಹೋರಾಟಗಾರರನ್ನು ಮತ್ತು ಖಾದಿ ಕಾರ್ಯಕರ್ತರನ್ನು ಗುರ್ತಿಸಿ ಅವರ ಊರು ಅಥವಾ ಸಮೀಪದ ಸ್ಥಳದಲ್ಲಿಯೇ ಸನ್ಮಾನಿಸುವ ಕಾರ್ಯಕ್ರಮವನ್ನು ವಾರ್ಷಿಕವಾಗಿ ಆಚರಿಸಿಕೊಂಡು ಬರುತ್ತಿದೆ.

4. **ಜಯಶ್ರೀ ದತ್ತಿ ಮತ್ತು ಆದಿ ಚುಂಚನಗಿರಿ ದತ್ತಿ** : ಈ ದತ್ತಿಗಳ ವತಿಯಿಂದ ಗಾಂಧೀ ಜಯಂತಿ ಸಂದರ್ಭದಲ್ಲಿ ಗಾಂಧಿ, ವಿನೋಬ ಮತ್ತು ರಾಷ್ಟ್ರೀಯ ಸಾಹಿತ್ಯದ ಬಗ್ಗೆ ಹೊರತರಲಾದ ಉತ್ತಮ ಕೃತಿ ಕರ್ತರಿಗೆ 2000-00 ರೂ ನಗದು ಬಹುಮಾನ ಮತ್ತು ನೆನಪಿನ ಕಾಣಿಕೆ ನೀಡಿ ಪುರಸ್ಕಾರ ನೀಡುವ ಕಾರ್ಯಕ್ರಮವನ್ನು ಪ್ರತಿವರ್ಷವೂ ನಡೆಸಿಕೊಂಡು ಬರುತ್ತಿದೆ.

5. **ದಿ. ಬಿ. ನಾರಾಯಣಪ್ಪ ಮತ್ತು ದಿ. ನಮ್ಮಾಳ್ವರ್ ದತ್ತಿ** : ಈ ದತ್ತಿಯಡಿಯಲ್ಲಿ ಗ್ರಾಮೀಣ ವಿಭಾಗದ ವಿದ್ಯಾರ್ಥಿಗಳಿಗೆ ಗಾಂಧೀ ಪ್ರಣೀತ ರಚನಾತ್ಮಕ ಕಾರ್ಯಕ್ರಮಗಳ ಬಗ್ಗೆ ಚರ್ಚಾ ಸ್ಪರ್ಧೆಗಳನ್ನು ಮತ್ತು ಪ್ರಬಂಧ ಸ್ಪರ್ಧೆಗಳನ್ನು ಶಾಲಾಕಾಲೇಜುಗಳಲ್ಲಿ ಏರ್ಪಡಿಸಿ ಗಾಂಧೀಜಿಯವರ ತತ್ವ ಆದರ್ಶಗಳ ಬಗ್ಗೆ ತಿಳುವಳಿಕೆ ನೀಡುವ ಕಾರ್ಯಕ್ರಮವನ್ನು ವಾರ್ಷಿಕವಾಗಿ ಮಾಗಡಿ, ಕುಣಿಗಲ್ ತಾಲ್ಲೂಕುಗಳಲ್ಲಿ ಹಮ್ಮಿಕೊಂಡು ಬರುತ್ತಿದೆ.

ವಿಶೇಷ ವಾರ್ಷಿಕ ಕಾರ್ಯಕ್ರಮಗಳು

2006-2007 ನೇ ಸಾಲಿನಲ್ಲಿ ಎನ್.ಎಸ್.ಎಸ್. ಸಹಯೋಗದೊಂದಿಗೆ ವರ್ಷ ಪೂರ್ತಿ "ವಾರಕ್ಕೊಂದು ಕಾರ್ಯಕ್ರಮ" ಎಂಬ ಶೀರ್ಷಿಕೆ ಅಡಿಯಲ್ಲಿ ಗಾಂಧೀ ಪ್ರಣೀತ ಕಾರ್ಯಕ್ರಮಗಳನ್ನು ಎನ್ ಎಸ್.ಎಸ್. ವಿದ್ಯಾರ್ಥಿಗಳಿಗೆ ಪರಿಚಯಿಸಲಾಗಿತ್ತು 2007-2008 ನೇ ಸಾಲಿನಲ್ಲಿ ಯುವ ಜನತೆಯಲ್ಲಿ ಗಾಂಧೀ ತತ್ವಗಳ ಪ್ರಚಾರಕ್ಕಾಗಿ, ಗಾಂಧೀ ಶಾಂತಿ ಪ್ರತಿಷ್ಠಾನದ ಸಹಕಾರದೊಂದಿಗೆ ಗ್ರಾಮಾಂತರ ಪ್ರದೇಶಗಳಲ್ಲಿ ಶಿಬಿರಗಳನ್ನು ಏರ್ಪಡಿಸಲಾಗುವುದು.

ಕಾರ್ಯಕಾರಿ ಸಮಿತಿ ಸದಸ್ಯರು

ಡಾ॥ ಹೊ. ಶ್ರೀನಿವಾಸಯ್ಯ, ಬೆಂಗಳೂರು	: ಅಧ್ಯಕ್ಷರು
ಪ್ರೊ. ಹೆಚ್.ಆರ್. ದಾಸೇಗೌಡ, ಬೆಂಗಳೂರು	: ಕಾರ್ಯದರ್ಶಿ
ಶ್ರೀ. ಡಿ.ಕೆ. ಕೋದಂಡರಾಮು, ಬೆಂಗಳೂರು	: ಜಂಟಿ ಕಾರ್ಯದರ್ಶಿ
ಶ್ರೀ ದಿಲೀಪ್ ಶ್ರೀರಂಗಕಾಮತ್, ಬೆಳಗಾವಿ	: ಸದಸ್ಯರು
ಶ್ರೀ ಎನ್. ಪ್ರಭಾಕರ್, ಬೆಂಗಳೂರು	: ಸದಸ್ಯರು
ಶ್ರೀ ಎಸ್.ಕೆ. ಮೋಹನ್, ಬೆಂಗಳೂರು	: ಸದಸ್ಯರು
ಶ್ರೀಮತಿ ನಿರ್ಮಲಾದೇವಿ, ಬೆಂಗಳೂರು	: ಸದಸ್ಯರು
ಶ್ರೀಮತಿ ಗಾಯಿತ್ರಿ ಚಂದ್ರಮೂರ್ತಿ, ಬೆಂಗಳೂರು	: ಸದಸ್ಯರು
ಶ್ರೀ ಲ. ನರಸಿಂಹಯ್ಯ, ತುಮಕೂರು.	: ಸದಸ್ಯರು
ಶ್ರೀ ಎಸ್. ವಿ. ಸೋಮನಟ್ಟಿ, ಹುಬ್ಬಳ್ಳಿ	: ಸದಸ್ಯರು
ಪ್ರೊ. ಓ. ಅನಂತರಾಮಯ್ಯ, ತುಮಕೂರು	: ಸದಸ್ಯರು
ಕಾರ್ಯದರ್ಶಿ ಕೇಂದ್ರ ಗಾಂಧೀ ಸ್ಮಾರಕ ನಿಧಿ, ನವದೆಹಲಿ.	: ಸದಸ್ಯರು.